ಶ್ರೀ ಜೆ.ಹೆಚ್. ಪಟೇಲ್ (ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ)	೧)	ಬೃಹತ್ ಉದ್ದಿಮೆಗಳು	೨೨೪
	೨)	ಮಧ್ಯಮ ಉದ್ದಿಮೆಗಳು	೩
	೩)	ಚಿಕ್ಕ ಪ್ರಮಾಣದ ಉದ್ದಿಮೆಗಳು	೨೨೧
ಆ)	೧)	ಬೃಹತ್ ಉದ್ದಿಮೆಗಳು	೭೪೬
	೨)	ಮಧ್ಯಮ ಉದ್ದಿಮೆಗಳು	
	೩)	ಚಿಕ್ಕ ಪ್ರಮಾಣದ ಉದ್ದಿಮೆಗಳು	೯೫೫

ANNOUNCEMENT

Reg.—Message from the Chairman, L.C.

MR. SPEAKER.—I have received the following message from the Chairman, Legislative Council:

"As required by Rule 114 of the Rules of Procedure and Conduct of Business in Karnataka Legislative Council, I send herewith the Karnataka Zilla Parishads, Taluk Panchayat Samithis, Mandal Panchayats (Amendment) Bill 1986 which has been agreed to by Legislative Council on 5-3-1986 without amendments."

ಗಮನ ಸೆಳೆಯುವ ಸೂಚನೆ

ಕೆ. ಆರ್. ನಗರ ತಾಲ್ಲೂಕಿನ ರೈತರಿಗೆ ಸಾಲ ವಿತರಣೆಯಲ್ಲುಂಟಾಗಿರುವ ಅನಾನುಕೂಲ

ಶ್ರೀ ಎಸ್. ನಂಜಪ್ಪ (ಕೆ.ಆರ್. ನಗರ).—ರಾಜ್ಯದ ಬಹು ಭಾಗಗಳಲ್ಲಿ ಆದರಲ್ಲೂ ಕೆ.ಆರ್. ನಗರ ತಾಲ್ಲೂಕಿನಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘಗಳು ಸಾಸ್ತಿಯಲ್ಲಿರುತ್ತವೆ. ಗ್ರಾಮೀಣ ಬ್ಯಾಂಕುಗಳು ಸಹ ವಸೂಲಾತಿಯ ನಿರ್ಬಂಧ ನಿಯಮಗಳನ್ನು ಪಾಲಿಸಬೇಕಾಗಿ ಸಾಲ ನೀಡುತ್ತಿಲ್ಲ. ಪೆಡ್ಡೂಲ್ಡ್ ಬ್ಯಾಂಕುಗಳೂ ರೈತರಿಗೆ ಸಾಲ ಕೊಡುತ್ತಿಲ್ಲ. ಇಂತಹ ಸ್ಥಿತಿಯಲ್ಲಿ ಸಣ್ಣ ಮತ್ತು ಮಧ್ಯಮ ರೈತರಿಗೆ ವ್ಯವಸಾಯ ಉಪಕರಣ ಬಿತ್ತನೆ ಬೀಜ, ಗೊಬ್ಬರ ಮತ್ತು ಎತ್ತು ಕೊಳ್ಳಲು ಆಗದೆ ತುಂಬಾ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ರೀತಿಯ ಸಂಕಷ್ಟವನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಈ ವಿಷಯದಲ್ಲಿ ರಾಜ್ಯ ಸರ್ಕಾರವು ಈಗಾಗಲೇ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ, ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ವಾಣಿಜ್ಯ ಬ್ಯಾಂಕುಗಳ ಒಂದು ವಿಶೇಷ ಸಭೆಯನ್ನು ಕರೆಯಲಾಗಿತ್ತು. ಈ ಸಭೆಯಲ್ಲಿ ರಾಜ್ಯದ ಯಾವುದೇ ಭಾಗದಲ್ಲಿ ಬರಗಾಲ ಪರಿಸ್ಥಿತಿಯಿಂದ ರೈತರಿಗೆ ಶೇಕಡ ೫೦ರಷ್ಟು ಫಸಲು ಬರದಿದ್ದರೆ, ಅಂತಹ ಪ್ರಕರಣಗಳಲ್ಲಿ ಬ್ಯಾಂಕುಗಳು ಬೆಳೆ ಸಾಲಗಳನ್ನು ಪುನರ್ಮನ್ನಾ ಸಾಲವಾಗಿ ಪರಿಗಣಿಸಲು ಸೂಕ್ತ ಸೂಚನೆಗಳನ್ನು ನೀಡಿದೆ. ಬ್ಯಾಂಕುಗಳು ಮೇವು ಬೆಳೆಯಲು ಮತ್ತು ಕೊಳ್ಳಲು ಸಹ ಸಾಲವನ್ನು ಒದಗಿಸಲು ಒಪ್ಪಿಕೊಂಡಿವೆ.

ಬೆಳೆ ವಿಮಾ ಯೋಜನೆಯ ನಿಯಮಗಳಂತೆ, ಎಲ್ಲೆಲ್ಲಿ ಬ್ಯಾಂಕುಗಳು ವಿಮಾ ಯೋಜನೆಯ ಹಣವನ್ನು ಸಾಮಾನ್ಯ ವಿಮಾ ನಿಗಮ (ಜಿ.ಐ.ಸಿ)ಯಿಂದ ಪಡೆಯಲು ಸಾಧ್ಯವಾಗಬಹುದೋ ಅಲ್ಲಲ್ಲಿ

ಅವರಿಂದ ಪರಿಹಾರ ಪಡೆಯಲು ತಿಳಿಸಲಾಗಿದೆ. ಈ ಕಾರ್ಯಕ್ರಮಗಳಿಂದ ರೈತರಿಗೆ ಎಲ್ಲೆಲ್ಲಿ ಅಗತ್ಯ ವಿದೆಯೋ ಅಲ್ಲಲ್ಲಿ ಬೆಳೆ ಸಾಲಗಳನ್ನು ಪಡೆಯಲು ಕಷ್ಟವಾಗಲಾರದು. ಮತ್ತೊಂದು ಮುಖ್ಯವಾದ ಅಂಶ ಎಂದರೆ, ಮುಂಗಾರು ಬೆಳೆಯು ಮೇ-ಜೂನ್ ತಿಂಗಳಿನಲ್ಲಿ ಪ್ರಾಪ್ತವಾಗುತ್ತದೆ. ಆ ಕಾಲವು ಪ್ರಾಪ್ತವಾಗುವ ಮೊದಲೇ ಮೇಲೆ ಹೇಳಿದ ಕಾರ್ಯಕ್ರಮಗಳನ್ನು ಜಾರಿಗೆ ತಂದು ರೈತರಿಗೆ ತೊಂದರೆ ಆಗದಂತೆ ರಾಜ್ಯ ಸರ್ಕಾರವು ಪ್ರಯತ್ನಿಸುವುದು.

ಶ್ರೀ ಎಸ್ ನಂಜಪ್ಪ.—ತಮಗೆ ಗೊತ್ತಿರುವ ಹಾಗೆ ಖಾಸಗಿಯವರು ಯಾರೂ ರೈತರಿಗೆ ಸಾಲ ಕೊಡುತ್ತಿಲ್ಲ. ಸಹಕಾರ ಸಂಘಗಳೂ ಸಹ ಕೆಲವು ಹಣವನ್ನು ದುರುಪಯೋಗ ಮಾಡಿಕೊಂಡು ರೈತರಿಗೆ ಸಾಲ ಕೊಡುವ ಸ್ಥಿತಿಯಲ್ಲಿ ಇಲ್ಲ. ಗ್ರಾಮೀಣ ಬ್ಯಾಂಕುಗಳು ಇನ್ನು ಸ್ಥಾಪನೆಯಾಗಿವೆ ಅವೂ ಸಹ ಸಾಲ ಕೊಡುತ್ತಿಲ್ಲ. ಷೆಡ್ಯೂಲ್ ಬ್ಯಾಂಕಿನವರು ಮೊದಲೇ ರೈತರನ್ನು ಹೊರಗೆ ಅಟ್ಟುತ್ತಿದ್ದಾರೆ. ಇಂಥ ದುಸ್ಥಿತಿಯಲ್ಲಿರುವ ಸಣ್ಣ ಮತ್ತು ಮಧ್ಯಮ ರೈತರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಎಲ್ಲೆಲ್ಲಿ ಸಹಕಾರ ಸಂಘಗಳು ರೈತರಿಗೆ ಸಾಲ ಕೊಡುವುದಿಲ್ಲವೋ, ಎಲ್ಲಿ ಷೆಡ್ಯೂಲ್ ಬ್ಯಾಂಕು ಮತ್ತು ಗ್ರಾಮೀಣ ಬ್ಯಾಂಕಿಂಗಳು ಸಾಲ ಕೊಟ್ಟಿವೆಯೋ ಅಲ್ಲಿ ಈ ಸಮಸ್ಯೆ ಇದೆ. ಅದಕ್ಕಾಗಿ ಅವರ ಸಭೆಯನ್ನು ಕರೆದು ಒಂದು ನಿರ್ಣಯ ಮಾಡಿದ್ದೇವೆ. ಶೇಕಡ ೫ಕ್ಕಿಂತ ಕಡಿಮೆ ಬೆಳೆ ಬಂದಲ್ಲಿ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವಾಗಿ ಪರಿವರ್ತಿಸುವುದಕ್ಕೆ ಒಪ್ಪಿಕೊಂಡಿದ್ದಾರೆ. ಅಲ್ಲದೆ ಈಗಾಗಲೇ ಖಾರಿಫ್ ಬೆಳೆ ಬಗ್ಗೆ ಡಿ.ಸಿ.ಯವರು ನೋಟಿಫಿಕೇಷನ್ ಇಶ್ಯೂ ಮಾಡಿದ್ದಾರೆ. ಬ್ಯಾಂಕಿನವರು ನಮ್ಮ ಸಲಹೆಯನ್ನು ಒಪ್ಪಿಕೊಂಡಿದ್ದಾರೆ. ಡಿ.ಸಿ.ಯವರು ರೆಕಮೆಂಡ್ ಮಾಡಿ ಪತ್ರ ಬರೆದರೆ ಅದರ ಆಧಾರದ ಮೇಲೆ ಸಾಲವನ್ನು ಪರಿವರ್ತಿಸುವುದಕ್ಕೆ ಒಪ್ಪಿದ್ದಾರೆ. ನಾವು ಕೊಟ್ಟಿರುವ ಸಲಹೆಯಿಂದ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಮೈಸೂರು, ಶಂಕರ ಟೆಕ್ಸ್‌ಟೈಲ್ ಮಿಲ್ಸ್, ದಾವಣಗೆರೆ ಮತ್ತು ಅಲೆಂಬಿಕ್ ಗ್ಲಾಸ್ ವರ್ಕ್ಸ್, ಬೆಂಗಳೂರು ಇವು ಮೂರು ಕಾರ್ಖಾನೆಗಳನ್ನು ಮುಚ್ಚಿರುವ ಬಗ್ಗೆ.

ಶ್ರೀ ಎಂ ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಶ್ರೀ ಕೃಷ್ಣ ರಾಜೇಂದ್ರ ಮಿಲ್ಸ್, ಮೈಸೂರು ಶಂಕರ್ ಟೆಕ್ಸ್‌ಟೈಲ್ ಮಿಲ್ಸ್, ದಾವಣಗೆರೆ ಮತ್ತು ಅಲೆಂಬಿಕ್ ಗ್ಲಾಸ್ ವರ್ಕ್ಸ್, ಬೆಂಗಳೂರು ಇವು ಮೂರು ಕಾರ್ಖಾನೆಗಳನ್ನು ಮುಚ್ಚಿರುವ ಬಗ್ಗೆ ನಾನು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ ಪಿಚ್. ಪಟೇಲ್ (ಭಾರೀ ಹಾಗೂ ಮಧ್ಯಮ ಕೈಗಾರಿಕೆಗಳ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ,

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಮೈಸೂರು, ಶಂಕರ್ ಟೆಕ್ಸ್‌ಟೈಲ್ ಮಿಲ್ಸ್, ದಾವಣಗೆರೆ ಮತ್ತು ಅಲೆಂಬಿಕ್ ಗ್ಲಾಸ್ ವರ್ಕ್ಸ್, ಬೆಂಗಳೂರು ಇವು ಮೂರು ಕಾರ್ಖಾನೆಗಳು ಮುಚ್ಚಿರುವುದು ನಿಜ.

ಶ್ರೀ ಕೃಷ್ಣರಾಜೇಂದ್ರ ಮಿಲ್ಲನ್ನು ಪುನಃ ಶುರು ಮಾಡುವಂತೆ ಕೆಲವೊಂದು ಪ್ರಯತ್ನಗಳನ್ನು ಮಾಡಲಾಗಿದೆ. ಶ್ರೀ ಕೃಷ್ಣರಾಜೇಂದ್ರ ಮಿಲ್ಸ್‌ನವರು ಕೊಡಬೇಕಾದ ಪೂರಾಣ ತೆರಿಗೆಯನ್ನು ಮುಂದೂಡುವಂತೆ ಆದೇಶವನ್ನು ಸಂಬಂಧಪಟ್ಟ ಇಲಾಖೆಗೆ ನೀಡಲಾಗಿದೆ. ಅದೂ ಅಲ್ಲದೆ ಮಿಲ್ಲಿಗೆ ಬೇಕಾಗುವ ವಿದ್ಯುತ್ ಪೂರೈಕೆ ಎಂದರೆ ಸುಮಾರು ೧.೫ ಲಕ್ಷ ಯೂನಿಟ್‌ಗಳನ್ನು ಹೆಚ್ಚಿಗೆ ಕೊಡುವಂತೆ ಸರ್ಕಾರ ಒಪ್ಪಿಕೊಂಡಿದೆ. ಬೇಕಾಗಿರುವ ಧನಸಹಾಯಕ್ಕಾಗಿ ಕೃಷ್ಣರಾಜೇಂದ್ರ ಮಿಲ್ಸ್‌ನವರು ಐ.ಡಿ.ಬಿ.ಐ. ಹಾಗೂ ಇತರೆ ಬ್ಯಾಂಕುಗಳಿಂದ ವ್ಯವಸ್ಥೆ ಮಾಡಬೇಕಾಗಿದೆ. ಹಣ ಸಹಾಯ ದೊರಕಿದ ನಂತರ ಅವರು ಗಿರಣಿಯನ್ನು ಶುರು ಮಾಡುವುದು ಸಾಧ್ಯ. ಇದೂ ಅಲ್ಲದೆ ಶ್ರೀ ಕೃಷ್ಣ ರಾಜೇಂದ್ರ ಮಿಲ್ಲಿನ ಸ್ವಾಧೀನದಲ್ಲಿರುವ ಹೆಚ್ಚಿನ ಜಮೀನನ್ನು ಮಾರುವುದಕ್ಕೆ ಸರ್ಕಾರ ಅನುಮತಿಯನ್ನು ಕೊಡಬೇಕೆಂದು ಮಿಲ್ ಮಾಲೀಕರು ಕೇಳಿಕೊಂಡಿದ್ದಾರೆ. ಅದು ಸಧ್ಯದಲ್ಲಿ ಪರಿಶೀಲನೆಯಲ್ಲಿದೆ.